**ದಿನಾಂಕಃ 27-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್. ವೈ. ಎಸ್. ವಕೀಲರಿಂದಃ-**

4. ನನ್ನ ಮೂಲ ಊರು ಶಿರಸಿ ತಾಲೂಕಿನ ಕಲಗುಂಡಿಕೊಪ್ಪ ಗ್ರಾಮ ಆಗಿರುತ್ತದೆ. ನನ್ನ ತಂದೆ ಕೃಷಿ ಕೆಲಸ ಮಾಡುತ್ತಿದ್ದರು. ಕೃಷಿಯಿಂದ ನನ್ನ ತಂದೆಗೆ ವಾರ್ಷಿಕವಾಗಿ 15 ರಿಂದ 20 ಲಕ್ಷ ಆದಾಯ ಬರುತ್ತಿತ್ತು. ನನ್ನ ತಂದೆಗೆ ಅಂದಾಜು 25 ಎಕರೆ ಕೃಷಿ ಜಮೀನು ಇತ್ತು. ನನ್ನ ತಾಯಿ ಗೃಹಿಣಿಯಾಗಿರುತ್ತಾರೆ. ನನಗೆ ಮೂರು ಜನ ಸಹೋದರರು ಮತ್ತು ಮೂರು ಜನ ಸಹೋದರಿಯರು ಇರುತ್ತಾರೆ. ನನ್ನ ಸಹೋದರರ ಪೈಕಿ ಎರಡು ಜನ ಬ್ಯಾಂಕಿನಲ್ಲಿ ಉದ್ಯೋಗ ಮಾಡಿ ನಿವೃತ್ತಿ ಹೊಂದಿರುತ್ತಾರೆ. ನನ್ನ ಮತ್ತೊಬ್ಬ ಸಹೋದರ ಕೃಷಿ ಮಾಡುತ್ತಾರೆ. ನನ್ನ ಸಹೋ ದರಿಯರ ಮದುವೆ ಆಗಿರುತ್ತದೆ. ನನ್ನ ಸಹೋದರಿಯರ ಮದುವೆಯನ್ನು ಬಹಳಷ್ಟು ಹಣ ಖರ್ಚು ಮಾಡಿ ನನ್ನ ತಂದೆ ಮಾಡಿದ್ದರು. ನನ್ನ ತಂದೆಗೆ ಶಿರಸಿಯ ಟಿ ಎಮ್ ಎಸ್ ನಲ್ಲಿ ಸಾಲ ಪಡೆದ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಂದೆ ಬೇರೆ ಸೊಸೈಟಿಯಿಂದ ಸಾಲ ಪಡೆದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಬಿ ಎಸ್ ಸಿ ಮತ್ತು ಡಿಫಾರ್ಮಾ ಪದವಿಧರನಾಗಿರುತ್ತೇನೆ. ನಾನು 1987-88 ರಲ್ಲಿ ಬಿ ಎಸ್ ಇ ಪದವಿಯನ್ನು ಮುಗಿಸಿದ್ದೆ. ಡಿಫಾರ್ಮಾ ದ ಅವಧಿ 2 ವರ್ಷ ಇತ್ತು. ನಾನು ಡಿಫಾರ್ಮ ನ್ನು 1988-89 ರಲ್ಲಿ ಮುಗಿಸಿದ್ದೆ. ನಾನು ಡಿಫಾರ್ಮಾ ವನ್ನು ಬೆಂಗಳೂರಿನ ವಿವೇಕಾನಂದ ಕಾಲೇಜ್ ಆಪ್ ಫಾರ್ಮಸಿಯಲ್ಲಿ ಮುಗಿಸಿದ್ದೆ.

5. 1999 ನೇ ಇಸವಿಯಲ್ಲಿ ನನ್ನ ಮದುವೆಯಾಗಿರುತ್ತದೆ. ಆ ಸಮಯ ನನ್ನ ಪತ್ನಿ ಉದ್ಯೋಗದಲ್ಲಿ ಇರಲಿಲ್ಲ. ನನಗೆ ಎರಡು ಮಕ್ಕಳು ಇರುತ್ತಾರೆ. ನನ್ನ ದೊಡ್ಡ ಮಗಳು ಐರ್ಲಾಂಡ್ ನ ಗಾರ್ಬೆಯಲ್ಲಿ ಬೂಟ್ಸ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಳೆ. ನನ್ನ ಇನ್ನೊಬ್ಬ ಮಗಳು ಈಗ ಕುಮಟಾದ ಸಿ.ವಿ.ಎಸ್.ಕೆ ಹೈಸ್ಕೂಲಿನಲ್ಲಿ 9 ನೇ ತರಗತಿ ಕಲಿಯುತ್ತಿದ್ದಾಳೆ.

6. ಪ್ರತಿವಾದಿ ಸಂಸ್ಥೆ 1994-95 ರಲ್ಲಿ ಸ್ಥಾಪನೆಯಾಗಿರುತ್ತದೆ. ಸದ್ರಿ ಸಂಸ್ಥೆಯನ್ನು ಎಮ್ ಎಸ್ ಭಟ್ ಮತ್ತು ಇತರರು ಸ್ಥಾಪನೆ ಮಾಡಿರುತ್ತಾರೆ. ನಾನು ಪ್ರತಿವಾದಿ ಸಂಸ್ಥೆಯಲ್ಲಿ Approved Manufacturing Chemist ಆಗಿ 1995 ರಲ್ಲಿ ಸೇರಿದ್ದೆ. ಪ್ರತಿವಾದಿ ಸಂಸ್ಥೆಯಲ್ಲಿ Approved Manufacturing Chemist ಹುದ್ದೆ ಖಾಲಿ ಇದೆ ಎಂದು ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ನನ್ನ ಅಕ್ಕನ ಮನೆ ಹೊನ್ನಾವರದಲ್ಲಿದ್ದು ನಾನು

ಅಲ್ಲಿಗೆ ಹೋಗಿದ್ದಾಗ ಮೋಹನ ಹೆಗಡೆ ಎನ್ನುವವರು ಸದ್ರಿ ಹುದ್ದೆ ಖಾಲಿ ಇದೆ ಎಂದು ನನಗೆ ಹೇಳಿದ್ದರು.

7. ನನಗೆ Charted Accountant ಆದ ಮೃತ್ಯುಂಜಯ ಹೆಗಡೆ ರವರ ಪರಿಚಯ ಇರುತ್ತದೆ. ಮೃತ್ಯುಂಜಯ ಹೆಗಡೆ Charted Accountant ಆಗಿ ಕೆಲಸ ಮಾಡುತ್ತಿದ್ದರು. ಸದ್ರಿ ಮೃತ್ಯುಂಜಯ ಹೆಗಡೆ ರವರು ಬೆಂಗಳೂರಿನಲ್ಲಿರುವ SS Securities Share Trading ಸಂಸ್ಥೆಯಲ್ಲಿ sub broker ಆಗಿ ಕೆಲಸ ಮಾಡಿದ್ದರು ಎಂದರೆ ಸರಿ. ನಾನು 1993–94 ನೇ ಸಾಲಿನಲ್ಲಿ ಸಾಯಂಕಾಲ ವೇಳೆಯಲ್ಲಿ ಮೃತ್ಯುಂಜಯ ಹೆಗಡೆ ರವರ ಬಳಿ ಸಹಾಯಕನಾಗಿ ಕೆಲಸ ಮಾಡಿದ್ದೆ. ಮೃತ್ಯುಂಜಯ ಹೆಗಡೆಯ ಬಾವನಾದ ಎಮ್ ಎಸ್ ಭಟ್ ಪ್ರತಿವಾದಿ ಸಂಸ್ಥೆಯ founder promoter ಆಗಿರುತ್ತಾರೆ. ಮೃತ್ಯುಂಜಯ ಹೆಗಡೆಯ ಶಿಫಾರಸ್ಸಿನ ಮೇಲೆ ಪ್ರತಿವಾದಿ ಸಂಸ್ಥೆಯಲ್ಲಿ ನಾನು ಕೆಲಸ ಪಡೆದಿದ್ದೆ. ನಾನು ಪ್ರತಿವಾದಿ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರುವ ಸಮಯದಲ್ಲಿ ಮೃತ್ಯುಂಜಯ ಹೆಗಡೆಯ ಬಾವನಾದ ಎಮ್ ಎಸ್ ಭಟ್ ರವರು ಪ್ರತಿವಾದಿ ಸಂಸ್ಥೆಯ Managing Director ಆಗಿದ್ದರು. ಆ ಸಮಯ ಪ್ರತಿವಾದಿ ಸಂಸ್ಥೆಯಲ್ಲಿ ಅಂದಾಜು 4–5 ಬೇರೆ ಡೈರೆಕ್ಟರುಗಳು ಇದ್ದರು. ನಾನು ಪ್ರತಿವಾದಿ ಸಂಸ್ಥೆಗೆ ಕೆಲಸಕ್ಕೆ ಸೇರಿದಾಗ ನನ್ನನ್ನು ಹೊರತುಪಡಿಸಿ ಎನ್ ಎಸ್ ಭಟ್ ಎಂಬುವವರು chemist ಆಗಿದ್ದರು. ನಾನು ಪ್ರತಿವಾದಿ ಸಂಸ್ಥೆಗೆ ಸೇರುವ ಮುಂಚೆ ಎನ್ ಎಸ್ ಭಟ್ ಎಂಬುವವರು ಪ್ರತಿವಾದಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಪ್ರತಿವಾದಿ ಸಂಸ್ಥೆಯಲ್ಲಿ Pharmaceutical Bulk Drugs ನ್ನು ಉತ್ಪಾದನೆ ಮಾಡಲಾಗುತ್ತಿತ್ತು. ಸದ್ರಿ Pharmaceutical Bulk Drugs ನ ಹೆಸರುಗಳು Sodium Chloride IP, Potassium Chloride IP, Sodium Citrate IP, Ammonium Chloride IP ಆಗಿರುತ್ತದೆ.

( **ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.** )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

Sd/-

(ಪರಮೇಶ್ವರ ಪ್ರಸನ್ನ. ಬಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ